**<u>ದಿನಾಂಕಃ 06-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್.ಎಸ್.ಕೆ.ವಕೀಲರಿಂದಃ</u>**

ನಾನು ದಿಃ 10-10-1976 ರಂದು ಜನಿಸಿರುತ್ತೇನೆ ಎಂದರೆ ಸರಿ. ನಾನು ಕೆಲಸ ಮಾಡುವ ಊರು ಮತ್ತು ನಾನು ವಾಸವಾಗಿರುವ ಊರಿನಿಂದ 4 ಕಿ.ಮೀ ದೂರ ಇದೆ. ಸದರಿ ಎರಡೂ ಊರುಗಳು ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆಯಲ್ಲಿ ಇರುತ್ತವೆ ಎಂದರೆ ಸರಿ. ಈ ದಿನ ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ನನ್ನ ಸ್ವಂತ ಊರಾದ ಹೊಸಕಲ್ಲೆಬಾಳು ಗ್ರಾಮದಿಂದ ಬಂದಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ರಾಣೇಬೆನ್ನೂರಿನ ಪಂಪಾನಗರದಿಂದ ಬಂದಿರುತ್ತೇನೆ. ಸದರಿ ಪಂಪಾನಗರ ರಾಣೇಬೆನ್ನೂರು ನ್ಯಾಯಾಲಯದಿಂದ ಒಂದು ಕಿ.ಮೀ ಅಂತರದಲ್ಲಿ ಇರುತ್ತದೆ. ಕೋರ್ಟ್ ನಿಂದ ಸದರಿ ಪಂಪಾನಗರ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಪಂಪಾನಗರದಲ್ಲಿ ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ಸೊಸೆ ಮನೆಯಿಂದ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡ, ಪಾನ್ ಕಾರ್ಡ ಮತ್ತು ರೇಶನ್ ಕಾರ್ಡ , ಚುನಾವಣಾ ಗುರುತಿನ ಚೀಟಿಗಳಲ್ಲಿ ನಾನು ವಾಸ ಇರುವ ಸ್ಥಳ ಹೊಸಕಲ್ಲೆಬಾಳು ತೋರಿಸುತ್ತವೆ ಎಂದರೆ ಸರಿ. ನಾನು ಬಿಪಿಎಲ್ ಕಾರ್ಡ ಹೊಂದಿದ್ದೇನೆ ಎಂದರೆ ಸರಿ. ಎಷ್ಟು ವಾರ್ಷಿಕ ಆದಾಯ ಇದ್ದವರಿಗೆ ಬಿಪಿಎಲ್ ಕಾರ್ಡನ್ನು ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಮಾಸಿಕ 30 ಸಾವಿರ ರೂಪಾಯಿ ಸಂಪಾದನೆ ಮಾಡುತ್ತೇನೆ ಎಂದು ನನ್ನ ಅರ್ಜಿ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿ ಹೇಳಿದ್ದು ಪ್ರತಿ ತಿಂಗಳು 30 ಸಾವಿರ ರೂಪಾಯಿ ಆದಾಯ ಹೊಂದಿರುವವರಿಗೆ ಸರ್ಕಾರದಿಂದ ಬಿಪಿಎಲ್ ಕಾರ್ಡನ್ನು ವಿತರಿಸುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಚಿಕಿತ್ಸೆಗೆ ರೂ.1,50,000/- ಖರ್ಚು ಮಾಡಿದ್ದೇನೆ ಮತ್ತು ಹೆಚ್ಚಿನ ಚಿಕಿತ್ಸೆಗೆ ರೂ.1,00,000/- ಅವಶ್ಯಕತೆ ಇರುತ್ತದೆ ಎನ್ನುವ ಬಗ್ಗೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಬಿಲ್ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತದ ನಂತರ ನನ್ನ ಬಲಗೈ ಎಬ್ಬೆರಳು ಎಡಗೈ ಎಬ್ಬೆರಳಿಗಿಂತ ಒಂದು ಸೆಂಟಿಮೀಟರ್ ಚಿಕ್ಕದಾಗಿರುತ್ತದೆ ಎಂದರೆ ಸಾಕ್ಷಿ ಒಂದು ಇಂಚಿಗಿಂತ ಹೆಚ್ಚು ಚಿಕ್ಕದಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಬಲಗೈ ಹೆಬ್ಬೆರಳಿನ ಉಗುರಿನಿಂದ ಕಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ಟ್ರಾಕ್ಟರನ ಹುಕ್ ನಲ್ಲಿಯೇ ನನ್ನ ಬಲಗೈ ಹೆಬ್ಬೆರಳು ಸ್ಥಳದಲ್ಲಿಯೇ ಕಟ್ಟಾಗಿರುತ್ತದೆ. ಸದರಿ ನನ್ನ ಬಲಗೈ ಹೆಬ್ಬೆರಳಿಗೆ ಚಿಕಿತ್ಸೆ ಪಡೆಯಲು ಒಂದೂವರೆ ಲಕ್ಷ ರೂಪಾಯಿ ಖರ್ಚಾಗಿರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ ಒಂದು ಲಕ್ಷ ರೂಪಾಯಿ ಬೇಕು ಎನ್ನುವ ಬಗ್ಗೆ ವೈದ್ಯರಿಂದ ಸರ್ಟಿಫಿಕೇಟ್ ನ್ನು ಪಡೆದು ಕೊಂಡು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ನನಗೆ ಅಂಗಛೇದವಾದ ಗಾಯವಾಗಿದ್ದು ಅದು 2 ನೇ ಷೆಡ್ಯೂಲ್ ನಲ್ಲಿ ಬರುತ್ತಿದ್ದು ಆ ಕಾರಣ ಅಂಗನ್ಯೂನತೆ ಪ್ರಮಾಣ ಪತ್ರ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಆದರ್ಶ ಎನ್ನುವವರು ನನಗೆ ಮೂರು-ನಾಲ್ಕು ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಅವರ ಬಳಿ ಕೆಲಸಕ್ಕೆ ಹೋಗುತ್ತಿದ್ದೆ. ಈಗ ನಾನು ಕೆಲಸಕ್ಕೆ ಹೋಗುತ್ತಿಲ್ಲ. ಅಪಘಾತವಾದ ತಕ್ಷಣ ನಾನು ಬಾಪೂಜಿಯ ಆಸ್ಪತ್ರೆಗೆ ಹೋಗಿ ಹೊರರೋಗಿಯಾಗಿ ಚಿಕಿತ್ಸೆ ಪಡೆದು ಕೊಂಡಿರುತ್ತೇನೆ. ಅಪಘಾತ ಹೇಗೆ ಆಯಿತು ಎನ್ನುವ ಬಗ್ಗೆ ಸದರಿ ಆಸ್ಪತ್ರೆಯ ಓಪಿಡಿಯಲ್ಲಿ ಹೇಳಿ ಬರೆಸಿರುತ್ತೇನೆ. ಟ್ರಾಕ್ಟರ ಕೆಲಸಕ್ಕೆ ಹೋದಾಗ ನನ್ನ ಬೆರಳು ಕಟ್ಟಾಗಿದೆ ಎಂದು ಓಪಿಡಿಯಲ್ಲಿ ಬರೆಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಎಕ್ಸ-ರೇ ತೆಗೆಸಿರುತ್ತೇನೆ. ಸದರಿ ಆಸ್ಪತ್ರೆಯವರು ನನಗೆ ಟ್ರಾಕ್ಟರ ನ ಹುಕ್ ನಲ್ಲಿ ಬೆರಳು ಕಟ್ಟಾಗಿದೆ ಎಂದು ಎಂ.ಎಲ್.ಸಿ ಮಾಹಿತಿಯನ್ನು ಪೋಲಿಸರಿಗೆ ಕೊಟ್ಟಿಲ್ಲ. ನಾನು ಚಿಕಿತ್ಸೆ ಪಡೆದ ದಿನದಂದೇ ಮನೆಗೆ ಹೋಗಿರುತ್ತೇನೆ. ಅಪಘಾತವಾಗಿ ಒಂದು ವಾರದ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಟ್ರಾಕ್ಟರ ನಂ.ಕೆಎ.17/ಟಿಇ-8411 ರಲ್ಲಿ ನನಗೆ ಅಪಘಾತ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗಿ 4 ದಿನಗಳ

ನಂತರ ಆದರ್ಶನೊಂದಿಗೆ ಮಿಲಾಪೆಯಾಗಿ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಆದರ್ಶನಿಗೆ ಟ್ರಾಕ್ಟರ ಚಲಾಯಿಸಲು ಡಿ.ಎಲ್ ಇರಲ್ಲಿ ಎಂದರೆ ಸರಿಯಲ್ಲ. ಟ್ರಾಕ್ಟರಗೆ ಗೋರ್ ಜೋಡಿಸಲು ಆರ್.ಟಿ.ಓ ರವರಿಂದ ಯಾವುದೆ ಪರವಾನಿಗೆ ಪಡೆದಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು ಪರಿಹಾರ ನೀಡಲು ಅರ್ಹವಾಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಎದುರುದಾರರು ಹಾಗೂ 2 ನೇ ಎದುರುದಾರರಾದ ವಿಮಾ ಕಂಪನಿಯು ದಾವಣಗೆರೆ ತಾಲ್ಲೂಕು ಮತ್ತು ದಾವಣಗೆರೆ ಜಿಲ್ಲೆಯಲ್ಲಿ ವಾಸವಾಗಿರುವುದರಿಂದ ಈ ಅರ್ಜಿಯು ಈ ನ್ಯಾಯಾಲಯದಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.